# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 35

ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 29-01-2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆ ಗುಡ್ಡಗಾಡು ಪ್ರದೇಶವಾಗಿದ್ದು, ಬಸ್ ಸಂಪರ್ಕ ಕಷ್ಟಸಾಧ್ಯವಾಗಿರುವ ಜಿಲ್ಲೆಯ ಹಲವಾರು ದೂರದ ಗ್ರಾಮಗಳಿಗೆ ಇದುವರೆಗೆ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸುತ್ತಿದ್ದ ಖಾಸಗಿ ಬಸ್ ಮಾಲೀಕರು ಕೋವಿಡ್ ಪರಿಸ್ಥಿತಿಯಿಂದಾಗಿ ನಷ್ಟ ಅನುಭವಿಸಿ, ಬಸ್ ಸಂಚಾರ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಖಾಸಗಿ ಬಸ್ ಮಾಲೀಕರ ತೆರಿಗೆ ವಿನಾಯಿತಿ ಹಾಗೂ ಡೀಸಲ್ ಬೆಲೆಯಲ್ಲಿ ರಿಯಾಯಿತಿ ಮತ್ತು ಇತರೇ ಬೇಡಿಕೆಗಳ ಕುರಿತು ಸರ್ಕಾರ ಕ್ರಮ ವಹಿಸುವುದೇ; | 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 09 ಟಿಡಿಆರ್ 2020, ದಿನಾಂಕ:19-05-2020 ರಲ್ಲಿ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ, ಕಲಂ 16(1) ರಂತೆ ರಾಜ್ಯದಲ್ಲಿ ನೋಂದಾಯಿಸಿರುವ ಎಲ್ಲಾ ಪ್ರಯಾಣಿಕ ಮತ್ತು ಸರಕು ಸಾರಿಗೆ ವಾಹನಗಳ ಮೋಟಾರು ವಾಹನ ತೆರಿಗೆಯನ್ನು ದಿನಾಂಕ: 24-03-2020 ರಿಮದ 23-05-2020 ರವರೆಗೆ ಒಟ್ಟು 02 ತಿಂಗಳ ಅವಧಿಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.<br>2. ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 09 ಟಿಡಿಆರ್ 2020 (ಪಿ-1), ದಿನಾಂಕ: 06-07-2020 ರಲ್ಲಿ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ 4(1) ರ ನಿಯಮಗಳನ್ನು ಸಡಿಲಿಸಿ ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ ಅನ್ವಯಿಸುವಂತೆ ದಿನಾಂಕ:15-04-2020 ಮತ್ತು 15-05-2020 ರೊಳಗಾಗಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆಯನ್ನು ದಿನಾಂಕ:15-07-2020 ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ. |

3. ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 09 ಟಿಡಿಆರ್ 2020 (ಪಿ-1), ದಿನಾಂಕ: 28-08-2020ರಲ್ಲಿ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ 4(1)ರ ನಿಯಮಗಳನ್ನು ಸಡಿಲಿಸಿ ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ ಅನ್ವಯಿಸುವಂತೆ ದಿನಾಂಕ:15-08-2020 ಮತ್ತು 15-09-2020 ರೊಳಗಾಗಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆಯನ್ನು ದಿನಾಂಕ: 30-09-2020 ರವರೆಗೆ ದಂಡರಹಿತವಾಗಿ ಪಾವತಿಸಲು ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಇ) ಜಿಲ್ಲೆಯಲ್ಲಿ ಸಂಪರ್ಕ ಕಷ್ಟಸಾಧ್ಯವಾಗಿರುವ ಹಲವಾರು ದೂರದ ಗ್ರಾಮಗಳಿಗೆ ಬಸ್ ಸಂಚಾರ ವ್ಯವಸ್ಥೆ ಮರು ಕಲ್ಪಿಸಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು :

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಾರಿಇ 174 ಸಾಇಪ 2015, ದಿನಾಂಕ: 07-03-2019 ರಲ್ಲಿ ಕರ್ನಾಟಕ ಸಮಗ್ರ ಪ್ರದೇಶ ಸಾರಿಗೆ ಯೋಜನೆ ಜಾರಿಗೆ ತಂದಿದ್ದು, ಇದರಲ್ಲಿ ಸಾರಿಗೆ ನಿಗಮಗಳು ಮಾತ್ರ ಕರ್ನಾಟಕ ರಾಜ್ಯಾದ್ಯಂತ ಪರವಾನಗಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಬಸ್ಸು ಸಂಚಾರ ಕಲ್ಪಿಸುತ್ತಿದ್ದ ಖಾಸಗಿ ಬಸ್ ಮಾಲೀಕರು, ಕೋವಿಡ್ ಪರಿಸ್ಥಿತಿಯಿಂದಾಗಿ ಬಸ್ ಸಂಚಾರ ನಿಲ್ಲಿಸಿರುವುದರಿಂದ, ಖಾಸಗಿ ಬಸ್ಸುಗಳ ಕಾರ್ಯಾಚರಣೆ ಸ್ಥಗಿತಗೊಂಡಿರುವ 09 ಮಾರ್ಗಗಳಲ್ಲಿ ಕ.ರಾ.ರ.ಸಾ.ನಿಗಮದ ವತಿಯಿಂದ ಒಟ್ಟು 30 ಸರತಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿತ್ತು. ಪ್ರಸ್ತುತ, ಸದರಿ 09 ಮಾರ್ಗಗಳ ಪೈಕಿ 07 ಮಾರ್ಗಗಳಲ್ಲಿ ಖಾಸಗಿ ಬಸ್ಸು ಮಾಲೀಕರು ಸಾರಿಗೆ ವ್ಯವಸ್ಥೆಯನ್ನು ಪುನರಾರಂಭಿಸಿದ್ದು, ಈ ಮಾರ್ಗಗಳಲ್ಲಿ ಜಿಲ್ಲಾಡಳಿತದ ನಿರ್ದೇಶನದಂತೆ ನಿಗಮದ ಸಾರಿಗೆಗಳನ್ನು ಹಿಂಪಡೆಯಲಾಗಿದೆ ಮತ್ತು ನಿಗಮದ ವತಿಯಿಂದ 02 ಮಾರ್ಗಗಳಲ್ಲಿ ಮಾತ್ರ ಪ್ರಸ್ತುತ ಸಾರಿಗೆಗಳ ಕಾರ್ಯಾಚರಣೆಯನ್ನು ಮುಂದುವರೆಸಲಾಗುತ್ತಿದೆ.

ಅಲ್ಲದೇ, ಸಿದ್ದಾಪುರ-ಮಾದಾಪುರ ಮಾರ್ಗದಲ್ಲಿ ಹೊಸ ಅನುಸೂಚಿಯೊಂದನ್ನು ಪ್ರಾರಂಭಿಸಲಾಗಿದ್ದು, 02 ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ ಖಾಸಗಿ ಬಸ್ಸುಗಳು ಕಾರ್ಯಾಚರಣೆ ಮಾಡುತ್ತಿದ್ದ ಒಟ್ಟು 03 ಮಾರ್ಗಗಳಲ್ಲಿ 06 ಸರತಿಗಳನ್ನು ನಿಗಮದ ವತಿಯಿಂದ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಮಾರ್ಗಗಳ ವಿವರ ಈ ಕೆಳಕಂಡಂತಿದೆ:

| ಕ್ರ. ಸಂ. | ಮಾರ್ಗ | | ವಯಾ | ಏಕ ಸುತ್ತುವಳಿಗಳು |
|---|---|---|---|---|
| | ಇಂದ | ವರೆಗೆ | | |
| 1. | ಮಡಿಕೇರಿ | ಸೋಮವಾರ ಪೇಟೆ | ಶುಂಠಿಕೊಪ್ಪ, ಕುಶಾಲನಗರ, ಕೂಡಿಗೆ, ಕೋವರ್‌ಕೊಲ್ಲಿ | 2 |
| 2. | ಮಡಿಕೇರಿ | ಕುಟ್ಟಾ | ಮೂರ್ನಾಡು, ಸಿದ್ದಾಪುರ, ಹುಂಡಿಹೊಳಮಾಳ, ಗೋಣಿಕೊಪ್ಪ, ಕಾನೂರು | 2 |
| 3. | ಮಡಿಕೇರಿ | ಮಾದಾಪುರ | ಸಿದ್ದಾಪುರ, ಚೆಟ್ಟಳ್ಳಿ, ಪೊನ್ನತ್ತಮೊಟ್ಟೆ, ಗದ್ದೆಹಳ್ಳ, ಶುಂಠಿಕೊಪ್ಪ, ಗಂಗಂದೂರು | 2 |
| | | | ಒಟ್ಟು | 6 |

<table>
<tr>
<td>ಈ)</td>
<td>ಜಿಲ್ಲೆಯಲ್ಲಿ ಈಗಲೂ ಬಸ್ ಸಂಪರ್ಕ ವ್ಯವಸ್ಥೆಯಿಂದ ವಂಚಿತವಾಗಿರುವ ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಯಾವುವು; ಯಾವ ಕಾಲಮಿತಿಯೊಳಗೆ ಈ ಗ್ರಾಮಗಳಿಗೆ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಲಾಗುವುದು?</td>
<td>ಕೊಡಗು ಜಿಲ್ಲೆಯಲ್ಲಿ ಒಟ್ಟು 301 ಗ್ರಾಮಗಳ ಪೈಕಿ 210 ಗ್ರಾಮಗಳಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕೊಡಗು ಜಿಲ್ಲೆಯು ಈ ಒಂದೆ ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದುದರಿಂದ ಖಾಸಗಿ ಪ್ರವರ್ತಕರು ಸಹ ಸಾರಿಗೆ ಸೌಲಭ್ಯ ಕಲ್ಪಿಸುತ್ತಿದ್ದಾರೆ. ಆದಾಗ್ಯೂ, ವಾಹನ ಸಂಚಾರಕ್ಕೆ ಯೋಗ್ಯ ರಸ್ತೆ ಇಲ್ಲದ ಕಾರಣ ಈ ಕೆಳಕಂಡ 15 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ.
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಗ್ರಾಮಗಳ ಹೆಸರು</th></tr>
<tr><td>1</td><td rowspan="6">ಸೋಮವಾರಪೇಟೆ</td><td>ಕೆಳಕೊಡ್ಲಿ</td></tr>
<tr><td>2</td><td>ದೊಡ್ಡಕೊಡ್ಲಿ</td></tr>
<tr><td>3</td><td>ಮಾದ್ರೆ</td></tr>
<tr><td>4</td><td>ಹೊನ್ನೆಕೋಡಿ</td></tr>
<tr><td>5</td><td>ಕಟ್ಟೆಪುರ</td></tr>
<tr><td>6</td><td>ಎಲಕನೂರು</td></tr>
<tr><td>7</td><td rowspan="8">ವಿರಾಜಪೇಟೆ</td><td>ದೇವಮಾಚಿ ಅರಣ್ಯ</td></tr>
<tr><td>8</td><td>ಅರಕೇರಿ ಅರಣ್ಯ</td></tr>
<tr><td>9</td><td>ನಂಗಾಲ</td></tr>
<tr><td>10</td><td>ರುದ್ರಗುಪ್ಪೆ</td></tr>
<tr><td>11</td><td>ಪುಲಿಯೇರಿ</td></tr>
<tr><td>12</td><td>ಕುಟ್ಟಂದಿ</td></tr>
<tr><td>13</td><td>ಹಳ್ಳಿಗಟ್ಟು</td></tr>
<tr><td>14</td><td>ಮತ್ತೂರು</td></tr>
<tr><td>15</td><td>ಮಡಿಕೇರಿ</td><td>ಮುತ್ತರ್ ಮುಡಿ</td></tr>
</table>
ಮುಂದುವರೆದು, ಕೊಡಗು ಜಿಲ್ಲೆಯಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವ ಕುರಿತಂತೆ ಕ.ರಾ.ರ.ಸಾ.ನಿಗಮವು ಸಮಗ್ರ ಪ್ರದೇಶ ಯೋಜನೆಯಡಿಯಲ್ಲಿ ಪರವಾನಿಗೆ ಮಂಜೂರಾತಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಕೊಡಗು ಇಲ್ಲಿ ಅರ್ಜಿ ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ.</td>
</tr>
</table>

ಟಿಡಿ 03 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.